ಮಾಜಿ ಸೈನಿಕರಿಗೆ ಕರ್ನಾಟಕ ಸರ್ಕಾರ ನೀಡುತ್ತಿರುವ ಸೌಲಭ್ಯಗಳು.

2400 (೨೭೬೭) ಶ್ರೀ ಪೂಜಾರ್ ಪಿ.ಹೆಚ್. (ಕೊಳ್ಳೆಗಾಲ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಾಜಿ ಸೈನಿಕರಿಗೆ ಕರ್ನಾಟಕ ಸರ್ಕಾರ ನೀಡುತ್ತಿರುವ ಸೌಲಭ್ಯಗಳೇನು; ವಿವರ ನೀಡುವುದು.

ಆ) ಮಾಜಿ ಸೈನಿಕರಿಗೆ ಸರ್ಕಾರಿ ನೇಮಕಾತಿಯಲ್ಲಿ ಪ್ರತಿಶತ ೧೦ರಷ್ಟು ಮೀಸಲಾತಿಯನ್ನು ನೀಡುವ ಕಡ್ಡಾಯ ಹಾಗೂ ಅಧಿಸೂಚನೆ ಎನನ್ನಾದರೂ ಸರ್ಕಾರ ಹೊರಡಿಸಿದೆಯೇ;

ಇ) ಹಾಗಿದಲ್ಲಿ ಈ ಮೀಸಲಾತಿ ನಿಯಮವನ್ನು ಪೋಲೀಸ್ ಇಲಾಖೆಗೂ ಅನ್ವಯಿಸಲಾಗಿದೆಯೇ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

ಅ) ಮಾಜಿ ಸೈನಿಕರಿಗೆ ಕರ್ನಾಟಕ ಸರ್ಕಾರ ನೀಡುತ್ತಿರುವ ಸೌಲಭ್ಯಗಳು ಈ ಕೆಳಗಿನಂತಿವೆ :—

೧) ಕರ್ನಾಟಕದ ಮೂಲನಿವಾಸಿ ಮಿಲಿಟರಿ ಪಿಂಚಣಿದಾರ ಮಕ್ಕಳಿಗೆ ಶಿಷ್ಯವೇತನ.

೨) ಪಿಂಚಣಿದಾರರಲ್ಲದ ಕರ್ನಾಟಕ ಹಾಗೂ ಹೊರ ರಾಜ್ಯದ ಮಾಜಿ ಸೈನಿಕರ ಮಕ್ಕಳಿಗೆ ಶಿಷ್ಯವೇತನ.

೩) ಮಾಜಿ ಸೈನಿಕ ಕನ್ನಡಿಗರ ಮಕ್ಕಳಿಗೆ ಟಿ.ಸಿ.ಹೆಚ್‌ನಲ್ಲಿ ೨೦ ಸೀಟುಗಳು ಮತ್ತು ಬಿ.ಇಡಿ (ಬಿಎಡ್) ನಲ್ಲಿ ೧೫ ಸೀಟುಗಳ ಮೀಸಲಾತಿಯನ್ನು ಒದಗಿಸಲಾಗುತ್ತಿದೆ.

೪) ಮಾಜಿ ಸೈನಿಕರ ಮಕ್ಕಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ತಾಂತ್ರಿಕ ಸೀಟುಗಳು ೫೦, ವೈದ್ಯಕೀಯ ಸೀಟುಗಳು ೬ ಮತ್ತು ದಂತ ವೈದ್ಯಕೀಯ ಸೀಟುಗಳು ೨ (ಒಟ್ಟು ೫೮ ಸೀಟುಗಳನ್ನು) ಮೀಸಲಿರಿಸಲಾಗುತ್ತಿದೆ.

೫) ೨ನೇ ಮಹಾ ಯುದ್ಧದಲ್ಲಿ ಪಾಲ್ಗೊಂಡು ಪಿಂಚಣಿ ಇಲ್ಲದ ಕರ್ನಾಟಕ ಯೋಧರಿಗೆ ಪ್ರತಿ ತಿಂದೌಗಳು ರೂ.೫೦೦.೦೦ ಗೌರವ ಧನ ನೀಡಲಾಗುತ್ತಿದೆ.

೬) ಶೌರ್ಯ ಮತ್ತು ಶೌರ್ಯೇತರ ಪ್ರಶಸ್ತಿ ವಿಜೇತರಿಗೆ ನಗದು ಅನುದಾನ ಹಾಗೂ ಜಮೀನು ಬದಲಾಗಿ ನಗದು ಅನುದಾನ ಹಾಗೂ ವರ್ಷಾಸನ ನೀಡಲಾಗುತ್ತಿದೆ.

ಬ) ಆಶ್ರಯ ಯೋಜನೆ ಅಡಿಯಲ್ಲಿ ಮಾಜಿ ಸೈನಿಕರಿಗೆ ಶೇಕಡಾ ೧೦ ನಿವೇಶನವನ್ನು ಕಾಯ್ದಿರಿಸಲಾಗಿದೆ.

ಭ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಶೇಕಡಾ ೧೦ ನಿವೇಶನವನ್ನು ಮಾಜಿ ಸೈನಿಕರಿಗೆ ಮೀಸಲಿರಿಸಲಾಗಿದೆ.

ಅ) ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು ೧೯೭೭, ನಿಯಮ ೯ರ ಪ್ರಕಾರ ಸರ್ಕಾರದ ಎಲ್ಲಾ ನೇರ ನೇಮಕಾತಿಗಳಲ್ಲಿ ಪ್ರತಿಶತ ೧೦ ರಷ್ಟು ಹುದ್ದೆಗಳನ್ನು ಮಾಜಿ ಸೈನಿಕರಿಗಾಗಿ ಕಾದಿರಿಸಿದೆ.

ಆ) ಹೌದು.

ಬೇಲೂರು ತಾಲ್ಲೂಕಿನಲ್ಲಿ ಭೂಸ್ವಾದೀನ ಪ್ರಕರಣ

2403 (2813) ಶ್ರೀ ಪುಟ್ಟರಂಗನಾಥ್ ಎಸ್.ಹೆಚ್. (ಬೇಲೂರು) :— ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೇಲೂರು ತಾಲ್ಲೂಕು ಹಿರಗುಪ್ಪೆ ಗ್ರಾಮದ ಸರ್ವೆ ನಂ.32, 33 ಮತ್ತು ಇತರೆ ಭೂಸ್ವಾದೀನ ಪ್ರಕರಣಕ್ಕೆ ಅಂದಾಜು ಸುಮಾರು 50 ಲಕ್ಷ ಠೇವಣಿ ಇಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದ್ದು, ಈ ಹಣ ಇಡದೆ ಇದ್ದುದರಿಂದ ಒಂದು ಬಾರಿ ಈ ಪ್ರಕರಣ ಅಸಿಂಧುವಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಎರಡನೇ ಬಾರಿಯು ಈ ಪ್ರಕರಣ ಅಸಿಂಧುವಾಗಲು ಕಾಲ ಸನ್ನಿಹಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಮಂತ್ರಿಗಳು) :—

ಅ) ಬೇಲೂರು ತಾಲ್ಲೂಕು ಹಿರಗುಪ್ಪೆ ಗ್ರಾಮದ ಸರ್ವೆ ನಂ.32, 33 ಮತ್ತು ಇತರೆ ಭೂಸ್ವಾದೀನ ಪ್ರಕರಣವು ಭೂ ದಾಖಲೆಗಳ ಇಲಾಖೆಯಿಂದ ಅಳತೆ ಕೆಲಸವು ತಡವಾಗಿ ಆದ ಕಾರಣ ಅಸಿಂಧುವಾಗಿದೆಯೇ ಹೊರತು ರೂ. 50.00 ಲಕ್ಷ ಠೇವಣಿ ಹಣ ಇಡದೇ ಇದ್ದುದರಿಂದ ಆಗಿರುವುದಿಲ್ಲ.

ಆ) 2ನೇ ಬಾರಿ ಈ ಪ್ರಕರಣವು ದಿನಾಂದ : 26-6-02ಕ್ಕೆ ಅಸಿಂಧುವಾಗುವ ಸಂಭವವಿರುವುದರಿಂದ ರೂ.30.00 ಲಕ್ಷ ಹಣ ಬಿಡುಗಡೆ ಮಾಡಲಾಗಿದೆ.